ತೊಂದರೆಯಾಗುತ್ತದೆ. ಸುಮಾರು 15-30 ಕಿ.ಮೀ. ದೂರದ ಹುಣಸೂರಿನಿಂದ ಹನಗೋಡು ಹೋಬಳಿಗೆ ಯಾವುದೇ ಒಬ್ಬ ಲೈನ್‌ಮ್ಯಾನ್ ಆಗಲೀ ಅಥವಾ ಇತರ ಸಿಬ್ಬಂದಿಯಾಗಲೀ ಬರಲಿಕ್ಕೆ ತೊಂದರೆಯಾಗುತ್ತದೆ. ಹನಗೋಡು ಹೋಬಳಿಯಲ್ಲಿ ವಿತರಣಾ ಕೇಂದ್ರವನ್ನು ತೆರೆಯುವುದಾಗಿ ದಯವಿಟ್ಟು ಮಾನ್ಯ ಸಚಿವರು ಭರವಸೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಅವರನ್ನು ಕೋರುತ್ತಿದ್ದೇನೆ.

ಶ್ರೀ ವೀರಕುಮಾರ್ ಎ. ಪಾಟೀಲ್ : ಮಾನ್ಯ ಅಧ್ಯಕ್ಷರೇ, 3 ನೇ ವಿತರಣಾ ಕೇಂದ್ರವನ್ನು ಬರುವ ವರ್ಷದಲ್ಲಿ ಸ್ಥಾಪಿಸಲಿದ್ದೇವೆ. ಕಾಂಟ್ರಾಕ್ಟ್ ಆರ್ಡರ್ ಆದ ಕೂಡಲೇ 9 ತಿಂಗಳಲ್ಲಿ ನಾನು ಆ ಕೆಲಸವನ್ನು ಮುಗಿಸಿ ಕೊಡುತ್ತೇನೆ.

ನೆಲಮಂಗಲ ಪಟ್ಟಣ ಹಾಗು ತಾಲ್ಲೂಕಿಗೆ ಅಗ್ನಿಶಾಮಕ ಇಲಾಖೆಯನ್ನು ಒದಗಿಸುವುದು

143 (1526) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನೆಲಮಂಗಲ ಪಟ್ಟಣ ಹಾಗೂ ತಾಲ್ಲೂಕಿನ ನಾನಾ ಭಾಗಗಳಲ್ಲಿ ಆಗಾಗ್ಗೆ ಬೆಂಕಿ ಅಪಘಾತಗಳು ನಡೆಯುತ್ತಿದ್ದು ಜನ ಜಾನುವಾರುಗಳು ಹಾಗೂ ಬಂಡವರು ವಾಸ ಮಾಡುವ ಗುಡಿಸಲುಗಳು ಆಕಸ್ಮಿಕ ಬೆಂಕಿ ದುರಂತಕ್ಕೆ ಈಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ, ನೆಲಮಂಗಲ ಪಟ್ಟಣದಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ಹೌದು

2) ನೆಲಮಂಗಲವು ಪೀಣ್ಯ ಅಗ್ನಿಶಾಮಕ ಠಾಣೆಯಿಂದ ಸುಮಾರು 15 ಕಿ.ಮೀ. ದೂರವಿದ್ದು, ಅಲ್ಲಿಂದ ರಸ್ತೆ ಮುಂತಾದವು ಸುಲಲಿತವಿದ್ದು, ನೆಲಮಂಗಲದಲ್ಲಿ ಅಗ್ನಿ ಅಪಘಾತ ಉಂಟಾದಾಗ ಅದನ್ನು ನಂದಿಸಲು ಯಾವುದೇ ತೊಂದರೆ ಇರುವುದಿಲ್ಲ. ಆದುದರಿಂದ ನೆಲಮಂಗಲದಲ್ಲಿ ಪ್ರತ್ಯೇಕ ಅಗ್ನಿಶಾಮಕ ಠಾಣೆ ತೆರೆಯುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಒಂದು ಮಾತನ್ನು ಬಹಳ ನೊಂದ ಮನಸ್ಸಿನಿಂದ ಇಲ್ಲಿ ಹೇಳಬೇಕಾಗಿದೆ. ನಮ್ಮ ನೆಲಮಂಗಲದ ಪಟ್ಟಣ ಬೆಂಗಳೂರು ನಗರಕ್ಕೆ ಹೆಬ್ಬಾಗಿಲಿನಂತೆ ಇದೆ. ರಾಜ್ಯದ 27 ಜಿಲ್ಲೆಗಳ ಪೈಕಿ 3 ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳ ವಾಹನಗಳು ಬೆಂಗಳೂರಿಗೆ ನೆಲಮಂಗಲದ ಮೂಲಕವೇ ಹಾದು ಹೋಗುತ್ತವೆ. 'ಉರಿಯುವ ದೀಪದ ಕೆಳಗಡೆ ಕತ್ತಲು' ಎಂಬ ಹಿರಿಯರು ನಾಣ್ನುಡಿಯಂತೆ ನೆಲಮಂಗಲ ಪಟ್ಟಣ ಬೆಂಗಳೂರು ನಗರದ ಹೆಬ್ಬಾಗಿಲಿನಂತೆ ಇದ್ದರೂ ಕೂಡ ಅನೇಕ ಸೌಲಭ್ಯಗಳಿಂದ ವಂಚಿತವಾಗಿದೆ. ಸುಮಾರು 10 ವರ್ಷಗಳಿಂದ ನಾನು ಈ ಬೇಡಿಕೆಯನ್ನು ಸರ್ಕಾರದ ಮುಂದಿಡುತ್ತಿದ್ದೇನೆ. ಅಲ್ಲಿ ಅನೇಕ ಬೆಂಕಿ ಅನಾಹುತಗಳಾಗುತ್ತಿದೆ. ಎಂದು ಹೇಳಿದರೂ ಕೂಡ

ಏಕೋ ಸರ್ಕಾರಕ್ಕೆ ನೆಲಮಂಗಲ ಒಂದು ಅಗ್ನಿಶಾಮಕ ಠಾಣೆ ಮಂಜೂರು ಮಾಡುವಲ್ಲಿ ಮಲತಾಯಿ ಧೋರಣೆ ತಾಳುತ್ತಿದೆ. ಕೆಲವು ಠಾಣೆಗಳು ಮಂಜೂರ ಮಾಡಿ ಅದಕ್ಕೆ ಸಿಬ್ಬಂದಿ ಒದಗಿಸಿಕೊಡಿ ಎಂದು ನಾನು ಅನೇಕ ಕಡೆಯಿಂದ ಒತ್ತಡವನ್ನು ಸರ್ಕಾರದ ಮೇಲೆ ಹಾಕಿದರೂ ಕೂಡ ಸರ್ಕಾರ ಅದಕ್ಕೆ ನಕಾರಾತ್ಮಕವಾದ ಧೋರಣೆಯನ್ನು ತಳೆದಿದೆ. ಫಸ್ಟ್ ಗ್ರೇಡ್ ಕಾಲೇಜನ್ನು ನಮ್ಮಲ್ಲಿ ಆರಂಭಿಸಿ ಎಂದು ಕೇಳಿದರೆ ಅದಕ್ಕೂ ಸರ್ಕಾರ ನಕಾರಾತ್ಮಕವಾದ ಉತ್ತರವನ್ನೇ ನೀಡಿದೆ. ಇನ್ನು ಮುಂದಾದರೂ ನಮ್ಮ ನೆಲಮಂಗಲ ಪಟ್ಟಣಕ್ಕ ಒಂದು ಅಗ್ನಿಶಾಮಕ ಠಾಣೆಯನ್ನು ಆದಷ್ಟು ಜಾಗ್ರತೆ ಮಂಜೂರು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಕೋರುತ್ತೇನೆ. ಅಲ್ಲಿ ಅನೇಕ ಅಹಿತಕರ ಘಟನೆಗಳು ಆಗ್ಗಿಂದಾಗ್ಗೆ ನಡೆಯುತ್ತಿರುವುದರಿಂದ ಅಲ್ಲಿಗೆ ಠಾಣೆ ಮತ್ತು ಸಿಬ್ಬಂದಿಯನ್ನು ಮಂಜೂರು ಮಾಡಿಕೊಡಬೇಕೆಂದೂ ಸಹಾ ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನೆಲಮಂಗಲ ಪಟ್ಟಣಕ್ಕೆ 15 ಕಿ.ಮೀ. ದೂರದಲ್ಲಿ ಪೀಣ್ಯದಲ್ಲಿ ಈಗಾಗಲೇ ಒಂದು ಅಗ್ನಿಶಾಮಕ ಠಾಣೆ ಇದೆ. ಆದರೆ ಅದರಿಂದ ನೆಲಮಂಗಲ ಪಟ್ಟಣಕ್ಕೆ ಅನುಕೂಲವಾಗುತ್ತಿಲ್ಲ. ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಹೊಸ ಠಾಣೆಗಳನ್ನು ಮಂಜೂರು ಮಾಡಬೇಕಾದಂತಹ ಪರಿಸ್ಥಿತಿ ಬಂದಾಗ ಅಥವಾ ಸೂಕ್ತ ಹಣಕಾಸಿನ ವ್ಯವಸ್ಥೆಯಾದಾಗ ಖಂಡಿತವಾಗಿಯೂ ನೆಲಮಂಗಲ ಪಟ್ಟಣಕ್ಕೂ ಕೂಡ ಅಗ್ನಿಶಾಮಕ ಠಾಣೆಯನ್ನು ಮಂಜೂರು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಪೀಣ್ಯದಲ್ಲಿ ಈಗಾಗಲೇ ಒಂದು ಠಾಣೆ ಇದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರಿಗೆ ಗೊತ್ತಿದ್ದಂತೆ ಪೀಣ್ಯ ಉತ್ತರಹಳ್ಳಿ ವಿಭಾಗಕ್ಕೆ ಬರುತ್ತದೆ. ಅದು ಸುಮಾರು 10 ಲಕ್ಷ ಜನಸಂಖ್ಯೆ ಇರತಕ್ಕಂಥ ಪ್ರದೇಶವಾಗಿದೆ. ಅಲ್ಲಿಂದ ನೆಲಮಂಗಲಕ್ಕೆ ಬರುವಷ್ಟರಲ್ಲಿ ಬಡವರ ಗುಡಿಸಲುಗಳು ಅಥವಾ ಮೆದೆಗಳು ಮತ್ತು ಇತರ ವಸ್ತುಗಳು ಸುಟ್ಟು ಬೂದಿಯಾಗಿರುತ್ತವೆ. ಆದ್ದರಿಂದ ನಾನು ಮತ್ತೊಮ್ಮೆ ಆದಷ್ಟು ಜಾಗ್ರತೆ ನೆಲಮಂಗಲಕ್ಕೆ ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಿಕೊಡುವಂತೆ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೆನೆ. ಕಳೆದ 10 ವರ್ಷದ ಈ ಬೇಡಿಕೆಯನ್ನು ಮಾನ್ಯ ಸಚಿವರು ಈಗಲಾದರೂ ಈಡೇರಿಸಬೇಕು. ಅಗ್ನಿಶಾಮಕ ಠಾಣೆ ಸ್ಥಾಪಿಸಲು ಬೇಕಾದ ಸ್ಥಳವನ್ನು ನಾವು ಕೊಡುತ್ತೇವೆ. ಸರ್ಕಾರಕ್ಕೆ ಈ ದಿಸೆಯಲ್ಲಿ ನಾವು ಎಲ್ಲಾ ರೀತಿಯ ಸಹಕಾರವನ್ನೂ ಸಹಾ ಕೊಡಲು ಸಿದ್ಧವಾಗಿದ್ದೇವೆ. ಆದ್ದರಿಂದ ಠಾಣೆ ಮಂಜೂರು ಮಾಡುವಂತೆ ಮತ್ತೊಮ್ಮೆ ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅಗ್ನಿಶಾಮಕ ಠಾಣೆ ಆರಂಭಿಸಲು ಬೇಕಾದಂತಹ ಎರಡು ಎಕರೆ ಜಾಗ ಮತ್ತು ಠಾಣೆಯ ಕಟ್ಟಡ ಒದಗಿಸಿಕೊಟ್ಟರೂ ಕೂಡ ಅಲ್ಲಿ ಕೆಲಸ ಮಾಡುವ ಸಿಬ್ಬಂದಿಗಳೂ ಸಹಾ ಬೇಕಾಗುತ್ತಾರೆ. ಇದು ಬಹಳ ಮುಖ್ಯವಾದುದಾಗಿರುತ್ತದೆ. ಆದ್ದರಿಂದ ಸರ್ಕಾರಕ್ಕೆ ಹಣಕಾಸಿನ ವ್ಯವಸ್ಥೆ ಆದಾಗ ಮತ್ತು ಸರ್ಕಾರ ಕೆಲವು ಹೊಸ ಅಗ್ನಿಶಾಮಕ ಠಾಣೆಗಳನ್ನು ತೆರೆಯಬೇಕೆಂಬ ಪ್ರಸ್ತಾವನೆಯನ್ನೇನಾದರೂ ಈ ಬಜೆಟ್‌ನಲ್ಲಿ ಇಟ್ಟಿದ್ದಾಗ ಮಾತ್ರ ನೆಲಮಂಗಲ ಪಟ್ಟಣದಲ್ಲೂ ಕೂಡ ಠಾಣೆ ತೆರೆಯಲು ಪರಿಶೀಲನೆ ಮಾಡುತ್ತೇನೆ ಎಂದು ನಾನು

ಈಗಾಗಲೇ ಹೇಳಿದ್ದೇನೆ. ತಕ್ಷಣವೇ ಅಲ್ಲಿಗೆ ಠಾಣೆ ಮಂಜೂರು ಮಾಡಲು ಕಷ್ಟವಾಗುತ್ತದೆ. ಹಣವಿಲ್ಲದೇ ಮತ್ತು ಬಜೆಟ್‌ನಲ್ಲಿ ಯಾವುದೇ ಪ್ರಸ್ತಾವನೆ ಇಲ್ಲದೇ ನಾನು ಆ ಮಾತನ್ನು ಇಲ್ಲಿ ಹೇಳುವುದು ಅಷ್ಟೊಂದು ಸರಿಯಾಗುವುದಿಲ್ಲ. ಆದ್ದರಿಂದ ಹೊಸದಾಗಿ ಠಾಣೆ ತೆರೆಯತಕ್ಕ ವಿಚಾರ ಬಂದಾಗ ಇಲ್ಲೂ ಕೂಡ ತೆರೆಯಲಿಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು ಭರವಸೆ ನೀಡುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ನೆಲಮಂಗಲ ತಾಲ್ಲೂಕಿನಲ್ಲೂ ಕೂಡ ನನ್ನ ಕ್ಷೇತ್ರದ ಶೇಕಡ 70 ರಷ್ಟು ಭಾಗ ಬರುತ್ತದೆ. ದಯಮಾಡಿ ನನಗೂ ಆಮೇಲೆ ಉಪ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ನೆಲಮಂಗಲ ಪಟ್ಟಣಕ್ಕೆ ಅಗ್ನಿಶಾಮಕ ವಾಹನಗಳು ತುಮಕೂರಿನಿಂದ ಆಗಲೀ ಅಥವಾ ಬೆಂಗಳೂರಿನಿಂದಾಗಲೀ ಬರಲಿಕ್ಕೆ ಸಾಧ್ಯವಿಲ್ಲ. ಬಡಜನರ ಮತ್ತು ತಾಲ್ಲೂಕಿನ ಹಿತದೃಷ್ಟಿಯಿಂದ ಮಾನ್ಯ ಸಚಿವರು ಹಣಕಾಸಿನ ವ್ಯವಸ್ಥೆಯಾದಾಗ ಅಥವಾ ಬಜೆಟ್‌ನಲ್ಲಿ ಪ್ರಪೋಸಲ್ ಇದ್ದಾಗ ಮಾತ್ರ ಕೊಡುತ್ತೇವೆ ಎಂಬ ಮಾತನ್ನು ದೂರ ತಳ್ಳಿ ದಯಮಾಡಿ ಈ ಶೈಕ್ಷಣಿಕ ವರ್ಷದಲ್ಲೇ ಅಲ್ಲಿಗೆ ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಬಜೆಟ್‌ನಲ್ಲಿ ಎಷ್ಟು ಹೊಸ ಠಾಣೆಗಳನ್ನು ತೆರೆಯಲು ಹಣ ಒದಗಿಸಲಾಗುವುದು ಎಂಬುದನ್ನು ನೋಡಿಕೊಂಡು ನಾನು ನೆಲಮಂಗಲದಲ್ಲಿ ಠಾಣೆ ಮಂಜೂರು ಮಾಡುತ್ತೇನೆ ಅಥವಾ ಇಲ್ಲ ಎಂಬ ಬಗ್ಗೆ ಹೇಳಬಹುದಾಗಿದೆ. ಅಂತಹ ಸಂದರ್ಭ ಬಂದಾಗ ಅಲ್ಲಿ ಠಾಣೆ ಸ್ಥಾಪಿಸುವ ಬಗ್ಗೆ ಪರಿಶೀಲಿಸುತ್ತೇನೆ ಎಂದು ನಾನು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಚೆನ್ನಿಗಪ್ಪನವರೇ, ತಮ್ಮ ಉಪ ಪ್ರಶ್ನೆಯನ್ನು ಈಗ ಕೇಳಿ.

12. 10 ಪಿ.ಎಂ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳಲ್ಲಿ ವಿನಂತಿ ಮಾಡುವುದು, ನೆಲಮಂಗಲ ತಾಲ್ಲೂಕು ಬೆಂಗಳೂರು ಜಿಲ್ಲೆಯಿಂದ 18 ಕಿ.ಮೀ. ಇದೆ. 49 ಕಿ.ಮೀ.ನಲ್ಲಿ ದಾಬಸ್‌ಪೇಟೆ ಎಂದು ಒಂದು ಹೋಬಳಿ ಹೆಡ್ ಕ್ವಾರ್ಟರ್ ಇದೆ. ಅದು ಈ ಗ ತಾಲ್ಲೂಕು ಆಗುವ ನಿಟ್ಟಿನಲ್ಲಿದೆ. ನೆಲಮಂಗಲ ತಾಲ್ಲೂಕಿನಲ್ಲಿ ವ್ಯವಸಾಯ ಬೆಳೆ ಜಾಸ್ತಿ ಬೆಳೆಯತಕ್ಕಂತಹ ರೈತರು ಇರುವ ಜಾಗ. ಎಂಟರಿಂದ 10 ಕಣಿವೆಗಳು ಬೆಂಕಿ ಅನಾಹುತದಿಂದ ಬಿದ್ದು ಹೋಗಿವೆ. ಕೆಲವು ಹಸುಗಳ ಷೆಡ್ಡುಗಳು ಬಿದ್ದು ಹೋಗಿರುವ ಪ್ರಕರಣಗಳು ನಡೆದಿವೆ. ನೆಲಮಂಗಲ ತಾಲ್ಲೂಕು ಕರ್ನಾಟಕ ರಾಜ್ಯದಲ್ಲಿ ಬೆಂಗಳೂರಿಗೆ ಹೆಬ್ಬಾಗಿಲು. ಅಲ್ಲಿ ಸರ್ಕಾರದ ವತಿಯಿಂದ ಡೆವಲಪ್‌ಮೆಂಟ್ ನೋಡಿದರೆ ಶೂನ್ಯ. ನೆಲಮಂಗಲ ಆಗಬಹುದು, ದಾಬಸ್‌ಪೇಟೆ ಆಗಬಹುದು, ಗ್ರಾಮಮೂಲ ಆಗಬಹುದು. ಈ ಮೂರು ಕಡೆಗಳಲ್ಲಿ ಎಲ್ಲಿಯಾದರೂ ಎರಡು ಎಕರೆ ಜಮೀನು ಸ್ವಂತ ಕೊಡಿಸುತ್ತೇವೆ. ದಯಮಾಡಿ ಮಂತ್ರಿಗಳು ಅಗ್ನಿಶಾಮಕ ಠಾಣೆ ಈ ವರ್ಷವೇ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಂಜನಮೂರ್ತಿಯವರು ಮತ್ತು ಚನ್ನಿಗಪ್ಪನವರು ಇಬ್ಬರೂ ಎಲ್ಲ ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ, ಖಂಡಿತವಾಗಿ ಮುಂದೆ ನಮಗೆ ಬಜೆಟ್‌ನಲ್ಲಿ 5- 10 ಅಗ್ನಿಶಾಮಕ ಠಾಣೆಗಳು ತೆರೆಯುವುದಕ್ಕೆ ಬಜೆಟ್‌ನಲ್ಲಿ ಅವಕಾಶವಾದರೆ ಅದರಲ್ಲಿ ಒಂದನ್ನು ಪರಿಶೀಲನೆ ಮಾಡಿ ಕೊಡುತ್ತೇವೆ.